ಕರ್ನಾಟಕ ಸರಕಾರ
GOVERNMENT OF KARNATAKA
ಕಾಲೇಜು ಶಿಕ್ಷಣ ಇಲಾಖೆ
DEPARTMENT OF COLLEGIATE EDUCATION



ಶ್ರೀ ವಿ. ಸುನಿಲ್ ಕುಮಾರ್
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಸಚಿವರು, ಕರ್ನಾಟಕ ಸರಕಾರ
ಮತ್ತು ದ.ಕ. ಜಿಲ್ಲಾ ಉಸ್ತುವಾರಿ ಸಚಿವರು



ಶ್ರೀ ಡಿ. ವೇದವ್ಯಾಸ ಕಾಮತ್
ಶಾಸಕರು, ಮಂಗಳೂರು ದಕ್ಷಿಣ ಕ್ಷೇತ್ರ
ಮತ್ತು ಅಧ್ಯಕ್ಷರು, ಕಾಲೇಜು ಅಭಿವೃದ್ಧಿ ಸಮಿತಿ



ಶ್ರೀ ಪಿ. ರವೀಂದ್ರ ಪೈ
ದಾನಿಗಳು



ಶ್ರೀ ಪಿ. ಸತೀಶ ಪೈ
ದಾನಿಗಳು



ಡಾ. ಪಿ. ದಯಾನಂದ ಪೈ
ಮಹಾಪೋಷಕರು

ಸಮಾಜದ ಹಿಂದುಳಿದ ವರ್ಗಗಳ ಯುವಜನಾಂಗದ ಉನ್ನತ ಶಿಕ್ಷಣದ ಕನಸಿನ ಸಾಕ್ಷಾತ್ಕಾರ ಹಾಗೂ ವಿಶ್ವಮಾನವ ಸಂಪನ್ಮೂಲಗಳಾಗಿ ಪರಿವರ್ತನೆ

Visualizing dreams of higher education of youth of backward sections of the society and transforming them into global human resources.

# ಡಾ. ಪಿ. ದಯಾನಂದ ಪೈ-ಪಿ. ಸತೀಶ ಪೈ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಂಗಳೂರು

ರಥಬೀದಿ, ಮಂಗಳೂರು - 575001, ದ.ಕ. ಜಿಲ್ಲೆ, ಕರ್ನಾಟಕ ರಾಜ್ಯ
(ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜನೆಗೆ ಒಳಪಟ್ಟಿದೆ.)

# DR. P. DAYANANDA PAI-P. SATISHA PAI GOVERNMENT FIRST GRADE COLLEGE, MANGALORE

CARSTREET, MANGALURU-575001, D.K. DIST., KARNATAKA STATE
(College has Permanent Affiliation of Mangalore University)

ನ್ಯಾಕ್ ಶ್ರೇಣಿ - 'ಬಿ'    NAAC GRADE – 'B'

ದೂರವಾಣಿ (ಸ್ಥಿರ) Phone(Land) : 0824-2494109, 2491073
Mobile: 8970788947 / 9902587083
ಮಿಂಚಂಚೆ E-mail: gfgcmangalorecarstreet@rocketmail.com
ವೆಬ್ ವಿಳಾಸ Website : http://gfgc.kar.nic.in/mangalore
http://www.gfgcmcarstreet.org

ಸ್ಥಾಪನಾ ವರ್ಷ : 2007-08



# ವಿವರಣಾ ಪತ್ರ-2022-23-PROSPECTUS

ವಿ.ಸೂ: ಆನ್‌ಲೈನ್ ಪ್ರವೇಶವನ್ನು ಕಾಲೇಜಿನಲ್ಲಿಯೇ ಪ್ರವೇಶ ಪಡೆದ ಕೂಡಲೇ ಮಾಡಿಕೊಡಲಾಗುವುದು.
ಸರ್ಕಾರದ ನಿರ್ಣಯ ಮತ್ತು ಆದಾಯಮಿತಿಗೊಳಪಟ್ಟು ಎಲ್ಲಾ ವಿದ್ಯಾರ್ಥಿನಿಯರಿಗೆ
ಶುಲ್ಕ ಮರುಭರಿಕರಣದ ವ್ಯವಸ್ಥೆಯಿದೆ.

## ಪರಿಚಯ



ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಂಗಳೂರು, ರಥಬೀದಿ ಈ ಕಾಲೇಜು 2007-08ನೇ ಶೈಕ್ಷಣಿಕ ವರ್ಷದಲ್ಲಿ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಕನಸುಗಳನ್ನು ಸಾಕಾರಗೊಳಿಸುವ ಉದ್ದೇಶವಿಟ್ಟುಕೊಂಡು ಅಂದಿನ ಶಾಸಕರೂ ಹಾಗೂ ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರೂ ಆದ ಶ್ರೀ ಯೋಗೀಶ್ ಭಟ್‌ರವರ ಕೋರಿಕೆ ಮೇರೆಗೆ ಕರ್ನಾಟಕ ಸರ್ಕಾರದಿಂದ ಸ್ಥಾಪಿಸಲ್ಪಟ್ಟಿತು. ಆರಂಭದಲ್ಲಿ ಬಲ್ಮಠದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕಟ್ಟಡದಲ್ಲಿ ತಾತ್ಕಾಲಿಕ ತರಗತಿಗಳನ್ನು ಆರಂಭಿಸಿ, ತದನಂತರ 2008ರಲ್ಲಿ ರಥಬೀದಿಯ ಸ್ವಂತ ಕಟ್ಟಡಕ್ಕೆ ಸ್ಥಳಾಂತರಗೊಂಡಿತು. ಸಾಹುಕಾರ್ ಪದ್ಮನಾಭ ರಘುನಾಥ ಪೈಯವರು ಮಂಗಳೂರು ಮಹಾನಗರ ಪಾಲಿಕೆಗೆ ದಾನವಾಗಿ ನೀಡಿದ 1.57 ಎಕರೆ ಜಮೀನಿನಲ್ಲಿ, ಶ್ರೀಯುತ ಡಾ. ಪಿ. ದಯಾನಂದ ಪೈ, ಮಾಲಕರು, ಸೆಂಚುರಿ ರಿಯಲ್ ಎಸ್ಟೇಟ್ ಹೋಲ್ಡಿಂಗ್ಸ್ ಪ್ರೈ.ಲಿ. ಬೆಂಗಳೂರು ಇವರ ರೂ. 2.45 ಕೋಟಿ ಧನ ಸಹಾಯದಿಂದ ಹಾಗೂ ಕರ್ನಾಟಕ ಸರ್ಕಾರದ ಅನುದಾನ 2.00 ಕೋಟಿ ರೂಪಾಯಿಗಳಲ್ಲಿ ರಚಿಸಲ್ಪಟ್ಟ ಕಟ್ಟಡ ಹೀಗೆ ಪ್ರಸ್ತುತ 2 ಮಹಡಿಯ ಸುಸಜ್ಜಿತ ಕಟ್ಟಡವನ್ನು ಹೊಂದಿರುತ್ತದೆ. ಪ್ರಸ್ತುತ 2ನೇ ಮಹಡಿಯಲ್ಲಿ 5 ತರಗತಿ ಕೋಣೆಗಳ ರಚನೆಯನ್ನು ರೂಸಾ ಅನುದಾನದ ಹೊಸ ಕಾಮಗಾರಿ ಯೋಜನೆಯಲ್ಲಿ ಹಾಗೂ ಕಾಲೇಜು ಶಿಕ್ಷಣ ಇಲಾಖೆಯ 18ಲಕ್ಷ ರೂಪಾಯಿಗಳ ಅನುದಾನದಲ್ಲಿ ಒಂದು ಪ್ರಯೋಗಾಲಯ ಕೊಠಡಿಯ ಕಾಮಗಾರಿಯು ಪೂರ್ಣಗೊಂಡಿರುತ್ತದೆ. 2013-18ರ ಸಾಲಿನಲ್ಲಿ ಶ್ರೀ ಜೆ.ಆರ್.ಲೋಬೋರವರು ಶಾಸಕರಾಗಿ ಈ ಕಾಲೇಜಿನ ಅಭಿವೃದ್ಧಿ ಸಮಿಯ ಅಧ್ಯಕ್ಷಗಿದ್ದು, ಶ್ರೀಯುತರ ಸಹಕಾರದಲ್ಲಿ ಕಾಲೇಜಿಗೆ ನ್ಯಾಕ್ ಗ್ರೇಡ್-'ಬಿ' ಪಡೆದಿರುತ್ತದೆ. 2020ರ ಫೆಬ್ರುವರಿ ತಿಂಗಳಲ್ಲಿ ಕಾಲೇಜಿಗೆ ಬಿಡುಗಡೆಗೊಂಡ 5.10 ಕೋಟಿ ರೂ.ಗಳ ಮೂಲಭೂತ ಸೌಕರ್ಯಗಳ ಕಾಮಗಾರಿಯು ಪೂರ್ಣಗೊಂಡಿದ್ದು, ಪ್ರಸ್ತುತ ರೂ. 1.60 ಕೋಟಿ ರೂ.ಗಳ ತರಗತಿ ಕೊಠಡಿಗಳ ನಿರ್ಮಾಣ ಕಾಮಾಗಾರಿಗೆ ಶಂಕುಸ್ಥಾಪನೆ ನಡೆದಿರುತ್ತದೆ. ಸ್ಥಾಪನೆಯ ಆರಂಭದ ವರ್ಷದಲ್ಲಿ ಕೇವಲ 270 ವಿದ್ಯಾರ್ಥಿಗಳನ್ನು ಹೊಂದಿದ್ದ ಈ ಸಂಸ್ಥೆ ಕೇವಲ 10 ವರ್ಷಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 1,700 ಕ್ಕೆ ಸಮೀಪಿಸಿದ್ದು. 2016-17ನೇ ಶೈಕ್ಷಣಿಕ ಸಾಲಿನಲ್ಲಿ 1,285 ವಿದ್ಯಾರ್ಥಿಗಳು, 2017-18ರಲ್ಲಿ 1,675 ವಿದ್ಯಾರ್ಥಿಗಳು, 2018-19ರಲ್ಲಿ 2,151 ವಿದ್ಯಾರ್ಥಿಗಳು, 2019-20ರಲ್ಲಿ 2,435 ವಿದ್ಯಾರ್ಥಿಗಳು, 2020-21ರಲ್ಲಿ 2,550 ಹಾಗೂ 2021-22ರಲ್ಲಿ 2553 ವಿದ್ಯಾರ್ಥಿಗಳು ವಿದ್ಯಾರ್ಜನೆಗೈಯುತ್ತಿದ್ದು, ಇದು ಈ ಸಂಸ್ಥೆ ತ್ವರಿತಗತಿಯಲ್ಲಿ ಬೆಳೆದು ಬಂದದಕ್ಕೆ ಸಾಕ್ಷಿಯಾಗಿದೆ. 2022-23ರ ಸಾಲಿನಲ್ಲಿ ಕಾಲೇಜು ವಿದ್ಯಾರ್ಥಿಗಳ ಸಂಖ್ಯೆ 2750ನ್ನು ದಾಟುವ ನಿರೀಕ್ಷೆಯಲ್ಲಿದೆ. ಕಾಲೇಜು ಆರಂಭಗೊಂಡ 9ನೇ ವರ್ಷದ 2015ರ ಸೆಪ್ಟೆಂಬರ್ ತಿಂಗಳಲ್ಲಿ 'ನ್ಯಾಕ್' ಸಂಸ್ಥೆಯಿಂದ ಪರಿಶೀಲನೆಗೊಳಪಟ್ಟು 'ಬಿ' ಶ್ರೇಣಿಯನ್ನು ಪಡೆದಿದ್ದು ಯುಜಿಸಿಯಿಂದ 2(ಎಫ್) ಮಾನ್ಯತೆಯನ್ನು ಹೊಂದಿರುತ್ತದೆ. 2015-16ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ರೂಸಾ (ರಾಷ್ಟ್ರೀಯ ಉನ್ನತ ಶಿಕ್ಷಣ ಅಭಿಯಾನ)ದ ಯೋಜನೆಯಡಿ ಈ ಕಾಲೇಜು ಗುರುತಿಸಲ್ಪಟ್ಟಿದ್ದು ಕಾಲೇಜಿನ ಅಭಿವೃದ್ಧಿಗೆ ಆರ್ಥಿಕ ನೆರವು ಬಂದಿರುತ್ತದೆ. 2016-17ರ ಸಾಲಿನಲ್ಲಿ ಕಾಲೇಜಿನಲ್ಲಿ ಎಂ.ಕಾಂ. ಸ್ನಾತಕೋತ್ತರ ಕೋರ್ಸನ್ನು 2017-18ರಲ್ಲಿ ಎಂ.ಎ. ರಾಜ್ಯಶಾಸ್ತ್ರ ಮತ್ತು ಎಂ.ಎಸ್.ಡಬ್ಲ್ಯೂ ಕೋರ್ಸನ್ನು ಸಹ ಆರಂಭಿಸಲಾಗಿದೆ.

ಈ ವಿದ್ಯಾಸಂಸ್ಥೆಯು ಸ್ಥಾಪನೆಯಾದ ಕಳೆದ 14 ವರ್ಷಗಳಿಂದ ಸಮಾಜದ ದುರ್ಬಲ ವರ್ಗದ ವಿದ್ಯಾರ್ಥಿಗಳು ಉತ್ಕೃಷ್ಟ ಮಟ್ಟದ ಉನ್ನತ ಶಿಕ್ಷಣವನ್ನು ಕನಿಷ್ಠ ವೆಚ್ಚದಲ್ಲಿ ಪಡೆಯಲು ಶಕ್ತರಾಗಿದ್ದಾರೆ. ಸಹಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಮುಖಾಂತರ ವಿದ್ಯಾರ್ಥಿಗಳ ಸುಪ್ತ ಪ್ರತಿಭೆಗಳನ್ನು ಅನಾವರಣಗೊಳಿಸುವ ನಿಟ್ಟಿನಲ್ಲಿ ಮಹತ್ತರ ಪಾತ್ರ ವಹಿಸಿದೆ. ಈ ಸಾಲಿನಲ್ಲಿ ಕಾಲೇಜಿನಲ್ಲಿ 3 ವಿಜ್ಞಾನ ಸ್ನಾತಕೋತ್ತರ ಹಾಗೂ 2 ಸ್ನಾತಕ ಕೋರ್ಸುಗಳನ್ನು ಆರಂಭಿಸುವ ಉದ್ದೇಶವಿದೆ. ಮಾನ್ಯ ಶಾಸಕರೂ ಹಾಗೂ ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರೂ ಆದ ಶ್ರೀ ಡಿ. ವೇದವ್ಯಾಸ ಕಾಮತ್ ಅವರ ಮಾರ್ಗದರ್ಶನದಲ್ಲಿ ಯಶಸ್ವಿಯಾಗಿ ಮುನ್ನಡೆಯುತ್ತಿರುವ ಈ ಕಾಲೇಜು ಮಂಗಳೂರು ವಲಯದ ಜಂಟಿ ನಿರ್ದೇಶಕರ ಕಛೇರಿಯ ದ.ಕ. ಜಿಲ್ಲೆಯ ನೋಡೆಲ್ ಕಾಲೇಜು ಆಗಿರುತ್ತದೆ. ಕಾಲೇಜಿಗೆ ನೀಡಿದ ದಾನವನ್ನು ಪರಿಗಣಿಸಿ ಕಾಲೇಜಿಗೆ ಡಾ. ಪಿ. ದಯಾನಂದ ಪೈ-ಪಿ.ಸತೀಶ ಪೈ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಂಗಳೂರು ಎಂದು ಮರುನಾಮಕರಣ ಮಾಡಲಾಗಿದೆ.

## VISION STATEMENT

"Visualizing dreams of higher education of youth of economically, socially, geographically backward sections of the society and to make them socially and economically competent, self-dependent and global human resources of the world."

## MISSION STATEMENT

- To become an institution of social transformation by providing quality higher education to youth from socially, economically, geographically backward and disadvantaged section of the society
- To strive for excellence in education by providing quality education in Arts, Commerce, Management, Basic Sciences & I.T. streams
- To provide exposure to various academic and non-academic programmes.
- To motivate youth to pursue higher education through quality infrastructure, scholarships, amenities, mentoring, counselling and other student support activities.
- To mould the young generation to be compassionate to nature, committed to values of Indian culture and conclusively contribute to the welfare of mankind and to make them responsible citizens of India.
- To provide opportunities for integral personality development of the youth and make them future leaders.
- To create an atmosphere wherein the youth are able to cherish the diverse rural traditions and inculcate feelings of communal harmony.
- To make the youth academically and socially competent by instilling knowledge, skills and values in order to mould them into global human resources.

## GOALS

Imparting Quality Education to the youths of Mangalore and neighboring villages & districts irrespective of color, race, religion, sex, caste & creed.

- Preferential option for poor, scheduled castes & tribes & women students.
- Achieving good result in the University Examinations.
- Promoting Sports & Games, Cultural and Community Development Activities.
- Establishment of just and peaceful environment and social order through educating rural youths.
- Instilling ethical and moral values among students through education.
- Providing multiple post graduate courses for the benefit of rural students.
- Providing multiple UG and PG courses for the benefit of rural students.
- Increasing campus strength to 3000 students within next 5 years.
- Inculcating Global Skills among the students.

## OBJECTIVES

The college aims at providing its students intellectual nourishment and also inculcating in them such values and skills in order to lead a quality life. In the light of this, the broad objectives are:

- To impart knowledge, expertise, guidance and positive motivation to the students.
- To help the "Slow Learners" and encourage the advanced learners.
- To impart value education to develop the moral uprightness.
- To develop self confidence among the students to face the challenges of life.
- To bring forth competent and employable graduates for suitable job placements.
- To provide opportunities for academic excellence and encourage innovations.
- To make the students ambitious in life and mould them into responsible global citizens.

## ಅಧ್ಯಯನದ ವಿಭಾಗಗಳು (Courses offered)

ಅ) ಸ್ನಾತಕ ಪದವಿ ಕೋರ್ಸುಗಳು:

ವಿಭಾಗ I: ಭಾಷಾ ವಿಭಾಗ : ಗ್ರೂಪ್1: ಕನ್ನಡ / ಹಿಂದಿ / ಸಂಸ್ಕೃತ / ತುಳು
ಗ್ರೂಪ್2: ಇಂಗ್ಲೀಷ್

ವಿಭಾಗ II:

1. ಬಿ.ಎ. ಕೋರ್ಸು :ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಮನಃಶಾಸ್ತ್ರ, ಐಚ್ಛಿಕ ಕನ್ನಡ, ಐಚ್ಛಿಕ ಇಂಗ್ಲೀಷ್, ಪತ್ರಿಕೋದ್ಯಮ, ಭೂಗೋಳಶಾಸ್ತ್ರ

ಯಾವುದಾದರೂ 2 ವಿಷಯಗಳನ್ನು ಮುಖ್ಯ ವಿಷಯಗಳನ್ನಾಗಿ ಆಯ್ಕೆ ಮಾಡಿಕೊಳ್ಳುವುದು.

2. ಬಿ.ಕಾಂ. ಕೋರ್ಸು :ಮಂಗಳೂರು ವಿಶ್ವವಿದ್ಯಾನಿಲಯದ ಕಡ್ಡಾಯ ವಿಷಯಗಳು (6 ಬ್ಯಾಚ್)
3. ಬಿ.ಬಿ.ಎ. ಕೋರ್ಸು :ಮಂಗಳೂರು ವಿಶ್ವವಿದ್ಯಾನಿಲಯದ ಕಡ್ಡಾಯ ವಿಷಯಗಳು
4. ಬಿ.ಎಸ್ಸಿ. ಕೋರ್ಸು :ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಗಣಕವಿಜ್ಞಾನ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ವಿದ್ಯುನ್ಮಾನಶಾಸ್ತ್ರ

ಯಾವುದಾದರೂ 2 ವಿಷಯಗಳನ್ನು ಮುಖ್ಯ ವಿಷಯಗಳನ್ನಾಗಿ ಆಯ್ಕೆ ಮಾಡಿಕೊಳ್ಳುವುದು.

5. ಬಿ.ಸಿ.ಎ. ಕೋರ್ಸು :ಮಂಗಳೂರು ವಿಶ್ವವಿದ್ಯಾನಿಲಯದ ಕಡ್ಡಾಯ ವಿಷಯಗಳು
6. ಬಿ.ಎಸ್.ಡಬ್ಲ್ಯು. ಕೋರ್ಸು:ಮಂಗಳೂರು ವಿಶ್ವವಿದ್ಯಾನಿಲಯದ ಕಡ್ಡಾಯ ವಿಷಯಗಳು

ವಿಭಾಗ III: Open Electives

ವಿಭಾಗ IV: Skill Enhancement Course : Digital fluency

ವಿಭಾಗ V: Table of Value Based (Credits) - 2022-23

| | Part-A | Credits | Part-B | Credits |
|---|---|---|---|---|
| I Sem | Yoga (2hrs/week) or Sports (2hrs/week) | 1 | H&W / SS / R&R ... Total of 17 options | 1 |
| II Sem | Sports (For those who took Yoga in the I Sem) or Yoga (For those who took Sports in the I Sem) | 1 | H&W / SS / R&R ... Total of 17 options | 1 |

ಆ) ಸ್ನಾತಕೋತ್ತರ ಪದವಿ ಕೋರ್ಸುಗಳು

1. ಎಂ.ಕಾಂ. :ಮಂಗಳೂರು ವಿಶ್ವವಿದ್ಯಾನಿಲಯದ ಕಡ್ಡಾಯ ವಿಷಯಗಳು
2. ಎಂ.ಎ. (ರಾಜ್ಯಶಾಸ್ತ್ರ) :ಮಂಗಳೂರು ವಿಶ್ವವಿದ್ಯಾನಿಲಯದ ಕಡ್ಡಾಯ ವಿಷಯಗಳು
3. ಎಂ.ಎಸ್.ಡಬ್ಲ್ಯು. :ಮಂಗಳೂರು ವಿಶ್ವವಿದ್ಯಾನಿಲಯದ ಕಡ್ಡಾಯ ವಿಷಯಗಳು

### 2022-23ರ ಸಾಲಿನಿಂದ ಹೊಸದಾಗಿ ಆರಂಭಿಸಲು ಉದ್ದೇಶಿಸಿರುವ ಕೋರ್ಸುಗಳು

ಅ) ಸ್ನಾತಕೋತ್ತರ ಪದವಿ ಕೋರ್ಸುಗಳು:

1. ಎಂ.ಎಸ್ಸಿ. ಭೌತಶಾಸ್ತ್ರ : ಮಂಗಳೂರು ವಿಶ್ವವಿದ್ಯಾನಿಲಯದ ಕಡ್ಡಾಯ ವಿಷಯಗಳು
2. ಎಂ.ಎಸ್ಸಿ. ರಸಾಯನಶಾಸ್ತ್ರ : ಮಂಗಳೂರು ವಿಶ್ವವಿದ್ಯಾನಿಲಯದ ಕಡ್ಡಾಯ ವಿಷಯಗಳು
3. ಎಂ.ಎಸ್ಸಿ. ಗಣಕ ವಿಜ್ಞಾನ : ಮಂಗಳೂರು ವಿಶ್ವವಿದ್ಯಾನಿಲಯದ ಕಡ್ಡಾಯ ವಿಷಯಗಳು

ಮುಂದೆ MBA/MCA ಕೋರ್ಸುಗಳನ್ನು ಸಹ ಆರಂಭಿಸಲು ಉದ್ದೇಶವಿರುತ್ತದೆ.

ಆ) ಬಿ.ಎ.-ಬಿ.ಎಡ್. ಮತ್ತು ಬಿ.ಎಸ್ಸಿ.-ಬಿ.ಎಡ್. 4 ವರ್ಷಗಳ ಇಂಟಿಗ್ರೇಟೆಡ್ ಕೋರ್ಸುಗಳನ್ನು ಆರಂಭಿಸಲು ಉದ್ದೇಶವಿರುತ್ತದೆ.

## ಪದವಿ ಅಧ್ಯಯನಕ್ಕೆ ಸಂಬಂಧಿಸಿದಂತೆ ಕೆಲವು ಸೂಚನೆಗಳು

- ವಿಭಾಗ 1ರಲ್ಲಿ 2 ಭಾಷೆಗಳನ್ನು ಅಧ್ಯಯನ ಮಾಡಬೇಕು. ಅದರಲ್ಲಿ ಒಂದು ಭಾರತೀಯ ಭಾಷೆಯಾಗಿರಬೇಕು.
- ಎಲ್ಲಾ ಸ್ನಾತಕ ಕೋರ್ಸುಗಳು ಆಯ್ಕೆ ಆಧಾರಿತ ಮೌಲ್ಯಾಂಕ ಪದ್ಧತಿಯ ಕೋರ್ಸುಗಳಾಗಿರುತ್ತವೆ.
- 100 ಅಂಕಗಳ ವಿಷಯಗಳಿಗೆ 20 ಅಂಕಗಳನ್ನು ಹಾಗೂ 150 ಅಂಕಗಳ ವಿಷಯಗಳಿಗೆ 30 ಅಂಕಗಳನ್ನು ಆಂತರಿಕವಾಗಿ ನೀಡಲಾಗುವುದು. ಆಂತರಿಕ ಅಂಕಗಳಿಗೆ ನಿಯೋಜಿತ ಕಾರ್ಯ (Assignment), ಪ್ರಬಂಧ ಮಂಡನೆ (Seminar) ಹಾಗೂ ಆಂತರಿಕ ಪರೀಕ್ಷೆ ಹೀಗೆ ಮೂರರಲ್ಲಿ ಪಡೆದ ಅಂಕಗಳನ್ನು ಗಣನೆಗೆ ತೆಗೆದುಕೊಂಡು ಅಂಕಗಳನ್ನು ನೀಡಲಾಗುವುದು.
- 1 ರಿಂದ 4ನೇ ಸೆಮಿಸ್ಟರ್ ಪದವಿ ವಿದ್ಯಾರ್ಥಿಗಳು ಪ್ರಥಮ 3 ಸೆಮಿಸ್ಟರ್‌ಗಳಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ನಿಗದಿಪಡಿಸಿದ ತಮ್ಮ ಐಚ್ಛಿಕ ವಿಷಯಕ್ಕೆ ಸಂಬಂಧಿಸಿದ ಆಯ್ಕೆ ಆಧಾರಿತ ಒಂದು ವಿಷಯವನ್ನು ಅಧ್ಯಯನ ಮಾಡಬೇಕಾಗಿದ್ದು, 4ನೇ ಸೆಮಿಸ್ಟರ್‌ನಲ್ಲಿ ಮೂಲ ವಿಷಯಕ್ಕೆ ಹೊರತಾದ Open-Elective ವಿಷಯವೊಂದನ್ನು ಅಧ್ಯಯನಮಾಡಬೇಕಾಗುತ್ತದೆ.
- ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಸಹಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಿಗೆ 50 ಅಂಕಗಳನ್ನು ನೀಡಲಾಗುವುದು. ಈ ಅಂಕಗಳಿಗೆ ಎನ್.ಎಸ್.ಎಸ್. / ಯುವ ರೆಡ್ ಕ್ರಾಸ್ / ರೋವರ್ಸ್ ಮತ್ತು ರೇಂಜರ್ಸ್ / ಲಲಿತಕಲೆ ಮತ್ತು ಸಾಂಸ್ಕೃತಿಕ / ಕ್ರೀಡಾ ವಿಭಾಗದಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಹಾಜರಾತಿ ಹಾಗೂ ಭಾಗವಹಿಸುವಿಕೆ ಆಧಾರದ ಮೇಲೆ ಅಂಕಗಳನ್ನು ನೀಡಲಾಗುವುದು.
- ಥಿಯರಿ ಹಾಗೂ ಪ್ರಾಯೋಗಿಕ ತರಗತಿಗಳಿಗೆ ಶೇ. 75ರಷ್ಟು ಹಾಜರಾತಿ ಕಡ್ಡಾಯ. ಹಾಜರಾತಿ ಶೇಕಡಾ 75ಕ್ಕಿಂತ ಕಡಿಮೆ ಇದ್ದಲ್ಲಿ, ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯುವಂತಿಲ್ಲ ಹಾಗೂ ಮುಂದಿನ ಸಾಲಿನಲ್ಲಿ ಕೋರ್ಸಿನ ಅದೇ ತರಗತಿಗೆ ಮರು ಸೇರ್ಪಡೆಗೊಳ್ಳಬೇಕಾಗುತ್ತದೆ.
- ಬಿ.ಎಸ್.ಡಬ್ಲ್ಯೂ ಕೋರ್ಸಿಗೆ ಕ್ಷೇತ್ರ ಕಾರ್ಯವಿದ್ದು, ಆಂತರಿಕ ಪರೀಕ್ಷೆ ಹಾಗೂ ವಿ.ವಿ. ಮಟ್ಟದ ಮೌಖಿಕ ಪರೀಕ್ಷೆ ಇರುತ್ತದೆ.

**ಪ್ರವೇಶಾರ್ಹತೆ:**

- ಯಾವುದೇ ಅಭ್ಯರ್ಥಿಯು ಆಯಾ ಕೋರ್ಸಿನ ಕರ್ನಾಟಕ ಪದವಿಪೂರ್ವ ಶಿಕ್ಷಣ ಮಂಡಳಿಯು ನಡೆಸಿರುವ 2 ವರ್ಷಗಳ ಅವಧಿಯ ಶಿಕ್ಷಣವನ್ನು ಅಥವಾ ಇತರ ತತ್ಸಮಾನ 12 ವರ್ಷಗಳ ಅವಧಿಯ ಶಿಕ್ಷಣ ಕ್ರಮವನ್ನು ಯಶಸ್ವಿಯಾಗಿ ಪೂರೈಸಿರಬೇಕು.

**ಪ್ರವೇಶ ದಾಖಲಾತಿ ಪ್ರಕ್ರಿಯೆ:**

1. ದಿನಾಂಕ 10-08-2022ರಿಂದ ಅರ್ಜಿ ನೀಡಲಾಗುತ್ತಿದ್ದು, ಫಲಿತಾಂಶ ಪ್ರಕಟಣೆಗೊಂಡ 3 ದಿನಗಳೊಳಗಾಗಿ ತೆರೆದ ಪ್ರವೇಶಕ್ಕೆ ಅರ್ಜಿಯನ್ನು ಹಿಂದೆ ಸಲ್ಲಿಸತಕ್ಕದ್ದು. ಅನಂತರ ಅರ್ಜಿ ಪಡೆದವರು ಮತ್ತೆ 3 ದಿನಗಳೊಳಗೆ ಮರಳಿಸತಕ್ಕದ್ದು. ಈ ಬಗ್ಗೆ ಪ್ರವೇಶವಾದ ಕೂಡಲೇ ಕಾಲೇಜಿನಲ್ಲಿಯೇ ಆನ್‌ಲೈನ್‌ನಲ್ಲಿ ದಾಖಲಿಸಲು ಅನುವುಮಾಡಿಕೊಡಲಾಗಿದೆ. ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ನೇರ ಪ್ರವೇಶ. ಪ್ರವೇಶ ದಿನಾಂಕವನ್ನು ಅರ್ಜಿ ಹಿಂದಕ್ಕೆ ನೀಡುವಾಗ ತಿಳಿಸಲಾಗುವುದು. ವೆಬ್‌ಸೈಟ್‌ನಲ್ಲಿ ಅರ್ಜಿ ಪಡೆದಲ್ಲಿ ಅರ್ಜಿ ಹಿಂದಿರುಗಿಸುವಾಗ ಮಾಹಿತಿಪತ್ರದ ಶುಲ್ಕವನ್ನು ಪಾವತಿಸುವುದು.
2. ಪ್ರವೇಶ ಬಯಸುವ ಅರ್ಜಿ ಹಾಗೂ ಮಾಹಿತಿ ಪತ್ರವನ್ನು ಕಾಲೇಜಿನ ಕಛೇರಿಯಿಂದ ನಿಗದಿತ ಶುಲ್ಕವನ್ನು ಪಾವತಿಸಿ ಪಡೆದು, ನಿಗದಿತ ನಮೂನೆಯಲ್ಲಿ ಸಂಪೂರ್ಣವಾಗಿ ತುಂಬಿಸಿದ ಅರ್ಜಿಯನ್ನು ನಿಗದಿತ ದಿನಾಂಕದೊಳಗೆ ಕಾಲೇಜಿನ ಕಛೇರಿಗೆ ತಲುಪಿಸತಕ್ಕದ್ದು.
3. ಆಯ್ಕೆಗೊಂಡ ವಿದ್ಯಾರ್ಥಿಗಳ ಪಟ್ಟಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. (ಅಂಚೆ ಮೂಲಕ ತಿಳಿಸಲಾಗುವುದಿಲ್ಲ). ಶುಲ್ಕದ ವಿವರಗಳನ್ನು ಹಾಗೂ ಹಾಜರುಪಡಿಸಬೇಕಾದ ದಾಖಲೆಗಳ ಮಾಹಿತಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲಾಗುತ್ತದೆ.
4. ಆಯ್ಕೆಗೊಂಡ ಅಭ್ಯರ್ಥಿಗಳು ಸೂಚಿತ ದಿನಾಂಕದೊಳಗೆ ಹೆತ್ತವರೊಂದಿಗೆ ಸಂದರ್ಶನಕ್ಕೆ ಹಾಜರಾಗಿ, ಸೂಚನಾ ಫಲಕದಲ್ಲಿ ಪ್ರಕಟಿಸಿರುವ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿ ಹಾಗೂ ನಿಗದಿತ ಶುಲ್ಕವನ್ನು ಪಾವತಿಸಿ ಪ್ರವೇಶ ಮಾಡಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಅಭ್ಯರ್ಥಿಗಳು ತಮ್ಮ ಪ್ರವೇಶಾವಕಾಶವನ್ನು ಕಳೆದುಕೊಳ್ಳುತ್ತಾರೆ.
5. ಪ್ರವೇಶಾತಿ ಪ್ರಕ್ರಿಯೆ ಸಂಪೂರ್ಣಗೊಳಿಸಿದ ನಂತರ ಯಾವುದೇ ವಿದ್ಯಾರ್ಥಿಯು ಪ್ರವೇಶಾತಿಯನ್ನು ರದ್ದುಪಡಿಸಲು ಇಚ್ಛಿಸಿದಲ್ಲಿ ಅವನು / ಅವಳು ಪಾವತಿಸಿದ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ. ಆದರೆ ಇತರೆ ಕೋರ್ಸಿಗೆ / ಕಾಲೇಜಿಗೆ ಸೇರ್ಪಡೆಗೊಂಡಲ್ಲಿ ಸರ್ಕಾರಿ ಶುಲ್ಕವನ್ನು ಅಲ್ಲಿಗೆ ವರ್ಗಾಯಿಸಲಾಗುವುದು.
6. ಮಂಗಳೂರು ವಿಶ್ವವಿದ್ಯಾನಿಲಯವು ನಿಗದಿಪಡಿಸಿದಂತೆ ಪ್ರತಿಯೊಬ್ಬ ವಿದ್ಯಾರ್ಥಿಗೆ ಯಾವುದೇ ವಿಷಯದಲ್ಲಿ 75% ರಷ್ಟು ಹಾಜರಾತಿ ಕಡ್ಡಾಯ. ಇಲ್ಲದಿದ್ದಲ್ಲಿ ವಿಶ್ವವಿದ್ಯಾನಿಲಯದ ಪರೀಕ್ಷೆಗಳಿಗೆ ಹಾಜರಾಗುವಂತಿಲ್ಲ.
7. ಪ್ರತಿಯೊಬ್ಬ ವಿದ್ಯಾರ್ಥಿಯು ಕಾಲೇಜಿನಲ್ಲಿ ನಡತೆ, ಹಾಜರಾತಿ, ಶಿಸ್ತು ಪ್ರಗತಿ ಇತ್ಯಾದಿ ವಿಷಯಗಳ ಬಗ್ಗೆ ರೂಪಿಸಿದ ಎಲ್ಲಾ ನಿಯಮಗಳಿಗೆ ಬದ್ಧನಾಗಿರಬೇಕು. ಈ ನಿಟ್ಟಿನಲ್ಲಿ ಹೆತ್ತವರು ಹಾಗೂ ರಕ್ಷಕರು ತಮ್ಮ ಸಂಪೂರ್ಣ ಸಹಕಾರವನ್ನು ನೀಡತಕ್ಕದ್ದು.
8. ಕಡ್ಡಾಯವಾಗಿ ಪ್ರವೇಶ ದಿನಾಂಕದಂದು ಅಸೈನ್‌ಮೆಂಟ್ ಪುಸ್ತಕಗಳನ್ನು ಸರಬರಾಜುದಾರರಿಂದ ಪುಸ್ತಕ ಒಂದರ ಅಂದಾಜು ಪ್ರತಿ ಒಂದರ ರೂ. 28/-ನ್ನು ಪಾವತಿಸಿ ಪಡೆದುಕೊಳ್ಳುವುದು. (8 ಪುಸ್ತಕಗಳು)
9. ಒಮ್ಮೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಹಿಂದಿನ ವರ್ಗಾವಣಾ ಪ್ರಮಾಣಪತ್ರವನ್ನು ಯಾವುದೇ ಕಾರಣಕ್ಕೂ ಹಿಂದಕ್ಕೆ ನೀಡಲಾಗುವುದಿಲ್ಲ.
10. ಒಮ್ಮೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಪ್ರವೇಶದ ಅಂತಿಮ ದಿನಾಂಕದೊಳಗೆ ಪ್ರವೇಶವನ್ನು ಹಿಂದಕ್ಕೆ ಪಡೆಯಲು ಬಯಸಿದ್ದಲ್ಲಿ ನಿಯಮಾನುಸಾರ ಶುಲ್ಕವನ್ನು ಹಿಂದಕ್ಕೆ ನೀಡಲಾಗುವುದು.

## ವಿದ್ಯಾರ್ಥಿಗಳಿಗೆ ಶಿಸ್ತು ಸಂಹಿತೆ:

1. <u>ಕಾಲೇಜಿನ ಸಮಯಾವಧಿ:</u> ವಾರದ ಎಲ್ಲಾ ದಿನಗಳಲ್ಲಿ ೯.೧೦ಕ್ಕೆ ಪ್ರಾರ್ಥನೆಯೊಂದಿಗೆ ತರಗತಿಗಳು ಆರಂಭವಾಗಿ, ಸಾಯಂಕಾಲ 4.15ರವರೆಗೆ ಹಾಗೂ ಶನಿವಾರದಂದು 1.30ರವರೆಗೆ ತರಗತಿಗಳು ನಡೆಯಲಿದ್ದು, ಕೆಲವು ತರಗತಿಗಳು ಶನಿವಾರ ಪೂರ್ಣಾವಧಿಗೆ ನಡೆಯುತ್ತವೆ. ಇನ್ನು ಕೆಲವು ತರಗತಿಗಳಿಗೆ ಶನಿವಾರದಂದು 1.30ರ ನಂತರ ವಿಶೇಷ ತರಗತಿಗಳನ್ನು ಸಹ ನಡೆಸಲಾಗುತ್ತದೆ. ತರಗತಿಗಳು ಮುಗಿದ ನಂತರ ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆ ಕಡ್ಡಾಯ.
2. <u>ಸಮವಸ್ತ್ರ:</u> ಎಲ್ಲಾ ವಿದ್ಯಾರ್ಥಿಗಳು ಕಾಲೇಜು ಆವರಣದೊಳಗೆ ಸಮವಸ್ತ್ರಕ್ಕೆ ಸಂಬಂಧಿಸಿದಂತೆ ಸರಕಾರದ / ರಾಜ್ಯ ಉಚ್ಛ ನ್ಯಾಯಾಲಯದ ಆದೇಶ ಪಾಲನೆ ಕಡ್ಡಾಯ. ಶಿರವಸ್ತ್ರ, ಜೀನ್ಸ್, ಕಾಲರ್‌ಲೆಸ್ ಟೀ-ಶರ್ಟ್ ಅಥವಾ ಯಾವುದೇ ತರಹದ ಕ್ಯಾಜುವಲ್ ಬಟ್ಟೆಗಳನ್ನು / ಬಿರಪಣಿಗೆ ಇರುವ ಬಟ್ಟೆಗಳನ್ನು ಧರಿಸುವುದನ್ನು ನಿಷೇಧಿಸಲಾಗಿದೆ. ಅಲ್ಲದೆ ಯಾವುದೇ ಕಾರಣಕ್ಕೂ ಸಮವಸ್ತ್ರದ ಹೊಲಿಗೆಯನ್ನು ಮಾರ್ಪಾಡು ಮಾಡುವಂತಿಲ್ಲ.
3. <u>ಗುರುತು ಚೀಟಿ:</u> ತರಗತಿಯೊಳಗೆ ಹಾಗೂ ಕಾಲೇಜು ಆವರಣದೊಳಗೆ ವಿದ್ಯಾರ್ಥಿಗಳು ಗುರುತು ಚೀಟಿಯನ್ನು ಧರಿಸುವುದು ಕಡ್ಡಾಯವಾಗಿದೆ.
4. <u>ಮೊಬೈಲ್ ಬಳಕೆ:</u> ಕಾಲೇಜು ಆವರಣದೊಳಗೆ ವಿದ್ಯಾರ್ಥಿಗಳು ಮೊಬೈಲ್ ಫೋನ್ ಅನ್ನು ಬಳಸುವಂತಿಲ್ಲ. ಈ ನಿಯಮವನ್ನು ಪಾಲಿಸದಿದ್ದಲ್ಲಿ ಮೊಬೈಲ್ ಫೋನುಗಳನ್ನು ಮುಟ್ಟುಗೋಲು ಹಾಕಲಾಗುವುದು.
5. <u>ಹಾಜರಾತಿ:</u> ಯಾವುದೇ ವಿದ್ಯಾರ್ಥಿ ದಿನವಿಡೀ ತರಗತಿಗೆ ಗೈರುಹಾಜರಾಗಿದ್ದಲ್ಲಿ ಹೆತ್ತವರು / ಪೋಷಕರಿಂದ ಸಹಿ ಮಾಡಲ್ಪಟ್ಟ ರಜಾ ಅರ್ಜಿಯನ್ನು ಮುಂದಿನ ತರಗತಿಯನ್ನು ಪ್ರವೇಶಿಸುವ ಮೊದಲು ತರಗತಿ ಉಪನ್ಯಾಸಕರಿಗೆ ತೋರಿಸತಕ್ಕದ್ದು. ಗೈರುಹಾಜರಾತಿ 3 ದಿನಗಳಿಗಿಂತ ಅಧಿಕವಾಗಿದ್ದಲ್ಲಿ ಪ್ರಾಂಶುಪಾಲರ ಅನುಮತಿ ಪಡೆದು ಮುಂದಿನ ತರಗತಿಗೆ ಹಾಜರಾಗಬೇಕು. ಕಾಲೇಜಿಗೆ ಬಂದ ನಂತರ ಮಧ್ಯದ ಅವಧಿಯಲ್ಲಿ ತೆರಳಬೇಕಾದಲ್ಲಿ ವಿದ್ಯಾರ್ಥಿಗಳು ಪ್ರಾಂಶುಪಾಲರಲ್ಲಿ ಲಿಖಿತ ಅನುಮತಿ ಪಡೆದು ತೆರಳತಕ್ಕದ್ದು.
6. <u>ಪರೀಕ್ಷೆಗಳಿಗೆ ಹಾಜರಾತಿ:</u> ಕಾಲೇಜಿನಲ್ಲಿ ನಡೆಸುವ ಎಲ್ಲಾ ಪರೀಕ್ಷೆಗಳಲ್ಲೂ ಸಹ ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯವಾಗಿದೆ. ಅನಿವಾರ್ಯ ಕಾರಣಗಳಿಂದ ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗದೆ ಇದ್ದಲ್ಲಿ ಹೆತ್ತವರು / ಪೋಷಕರು ಪ್ರಾಂಶುಪಾಲರನ್ನು ಭೇಟಿಯಾಗಿ ಮರು ಪರೀಕ್ಷೆಗೆ ಅರ್ಜಿ ಸಲ್ಲಿಸಿದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಮರು ಪರೀಕ್ಷೆ ನಡೆಸಲಾಗುವುದು.
7. <u>ಶಿಕ್ಷಕ-ರಕ್ಷಕ ಸಭೆಗಳು:</u> ಕಾಲೇಜಿನಲ್ಲಿ ಆಯೋಜಿಸಿದ ಶಿಕ್ಷಕ-ರಕ್ಷಕ ಸಂಘದ ಎಲ್ಲಾ ಸಭೆಗಳಲ್ಲಿ ಹೆತ್ತವರು ಕಡ್ಡಾಯವಾಗಿ ಭಾಗವಹಿಸತಕ್ಕದ್ದು. ಯಾವುದೇ ಅನಿವಾರ್ಯ ಕಾರಣಗಳಿದ್ದಲ್ಲಿ ಮಾತ್ರ ಹೆತ್ತವರ ಬದಲಿಗೆ ಪೋಷಕರು ಈ ಸಭೆಯಲ್ಲಿ ಹಾಜರಾಗಬಹುದು.
8. ಖಾಸಗಿ ಸಹಭಾಗಿತ್ವದಲ್ಲಿ ಸಾಕಷ್ಟು ವಿದ್ಯಾರ್ಥಿ ವೇತನಗಳಿರುತ್ತವೆ. ಜಿಂದಾಲ್ ಟ್ರಸ್ಟ್, ಅಲ್‌ಕಾರ್ಗೋ, ರಾಮಕೃಷ್ಣ ಆಶ್ರಮ ಹೀಗೆ ಹಲವಾರು ಸಂಸ್ಥೆಗಳು ವಿದ್ಯಾರ್ಥಿ ವೇತನ ನೀಡುತ್ತಿದ್ದಾರೆ.
9. **COVID-19** ಸೋಂಕಿನ ಹಿನ್ನೆಲೆಯಲ್ಲಿ ಲಾಕ್‌ಡೌನ್ ಅವಧಿಯಲ್ಲಿ **ONLINE** ತರಗತಿಗಳನ್ನು ನಡೆಸಲು ಆದೇಶಿಸಿದ್ದಲ್ಲಿ ಆನ್‌ಲೈನ್ ತರಗತಿಗಳಿಗೆ ಹಾಜರಾತಿ ಕಡ್ಡಾಯವಾಗಿರುತ್ತದೆ.

## ಕಾಲೇಜಿನ ವಿಶೇಷತೆಗಳು:

- ವಿದ್ಯಾರ್ಥಿಗಳಿಗೆ ರಾಜೀವ ಗಾಂಧಿ ಸಾಲರೂಪದ ಬಡ್ಡಿರಹಿತ ವಿದ್ಯಾರ್ಥಿವೇತನ ಸೌಲಭ್ಯವಿರುತ್ತದೆ ಮತ್ತು ಪದವಿಯ ಎಲ್ಲಾ ವಿದ್ಯಾರ್ಥಿನಿಯರಿಗೆ ಕಾಲೇಜು ಶಿಕ್ಷಣ ಇಲಾಖೆಯ ಅಂಕಗಳ ಆಧಾರದ ಮೇಲೆ ನೀಡುವ ಸಂಚಿ ಹೊನ್ನಮ್ಮ ರೂ. ೨೦೦೦/- ವಿದ್ಯಾರ್ಥಿವೇತನ ಹಾಗೂ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಶೇ. ೮೦ಕ್ಕಿಂತ ಹೆಚ್ಚು ಅಂಕ ಪಡೆದಲ್ಲಿ ಮೆರಿಟ್ ಮೇರೆಗೆ ರೂ.೫೦೦೦/-ದ ಸಿ.ವಿ. ರಾಮನ್ ವಿದ್ಯಾರ್ಥಿವೇತನದ ಸೌಲಭ್ಯವಿರುತ್ತದೆ.
- ಕಾಲೇಜು ನುರಿತ, ತರಬೇತಿ ಹೊಂದಿದ, ಸೃಜನಶೀಲ, ಕ್ರಿಯಾತ್ಮಕ ಉಪನ್ಯಾಸ ಸಿಬ್ಬಂದಿ ವರ್ಗವನ್ನು ಹೊಂದಿದೆ.
- ಕಾಲೇಜು ಶಿಕ್ಷಣ ಇಲಾಖೆಯ ನೈಪುಣ್ಯಸಿರಿ ಕಾರ್ಯಕ್ರಮದಡಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸಂವಹನ ಕೌಶಲ್ಯ, ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಸಾಮಾಜಿಕ ಕೌಶಲ್ಯ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ವೃತ್ತಿ ಕೌಶಲ್ಯಗಳಲ್ಲಿ ಉಚಿತ ಹಾಗೂ ಕಡ್ಡಾಯ ತರಬೇತಿ ಕಾರ್ಯಕ್ರಮವಿದೆ.
- ಕಾಲೇಜಿನಲ್ಲಿ ಎಜ್ಯುಸ್ಯಾಟ್ / ಎಜ್ಯುಟೆಲ್ ಡಿಶ್ ಅನ್ನು ಅಳವಡಿಸಿದ್ದು, ವಿವಿಧ ವಿಷಯಗಳಿಗೆ ಆನ್‌ಲೈನ್ ಪಾಠ ಪ್ರವಚನಗಳನ್ನು ಕಾಲೇಜು ಶಿಕ್ಷಣ ಇಲಾಖೆಯ ವತಿಯಿಂದ ಆಯೋಜಿಸಲಾಗುತ್ತದೆ.
- ೯೦% ರಷ್ಟು ವಿದ್ಯಾರ್ಥಿಗಳಿಗೆ ವಿವಿಧ ವಿದ್ಯಾರ್ಥಿವೇತನದ ಸೌಲಭ್ಯವಿರುತ್ತದೆ.
- ಅಂತಿಮ ಪದವಿ ವಿದ್ಯಾರ್ಥಿಗಳಿಗೆ Hinduja Global Solutions, Diya Systems, Bharath Auto Cars, Infosys, IBM, Accenture ಇತ್ಯಾದಿ ಕಂಪೆನಿಗಳಿಂದ ಕ್ಯಾಂಪಸ್ ಆಯ್ಕೆಗೆ ಅವಕಾಶವಿರುತ್ತದೆ.
- ಕಾಲೇಜು ಕೇಂದ್ರ ಸರ್ಕಾರದ ರೂಸಾ ಯೋಜನೆಯಡಿ ಗುರುತಿಸಲ್ಪಟ್ಟ ಕಾರಣ ಕಾಲೇಜಿನ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಧನ ಸಹಾಯ ಪಡೆದಿದ್ದು, ಕಾಲೇಜಿನಲ್ಲಿ ಸ್ಮಾರ್ಟ್ ಕ್ಲಾಸ್, Google Classroom ಮೂಲಕ ಆನ್‌ಲೈನ್ ಪಾಠಗಳಂತಹ ಉತ್ಕೃಷ್ಟ ಗುಣಮಟ್ಟದ ಸೌಲಭ್ಯಗಳನ್ನು ಒದಗಿಸಲಾಗಿದೆ.
- ಈಗಾಗಲೇ ೮೦೦ ವಿದ್ಯಾರ್ಥಿಗಳಿಗೆ ಆರಂಭಿಸಿರುವ ಮಧ್ಯಾಹ್ನದ ಊಟದ ಯೋಜನೆಯನ್ನು ದಾನಿಗಳ ಸಹಾಯದಿಂದ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳಿಗೆ ವಿಸ್ತರಿಸಲು ಯೋಜನೆಯಿದೆ.
- ಕಾಲೇಜಿನ ಅಭಿವೃದ್ಧಿ ಸಮಿತಿ ಹಾಗೂ ದಾನಿಗಳ ಸಹಾಯದಿಂದ ಕಾಲೇಜನ್ನು ಮಾದರಿ ಕಾಲೇಜನ್ನಾಗಿ ಪರಿವರ್ತಿಸಲಾಗುವುದು.
- ವಿದ್ಯಾರ್ಥಿಗಳಿಗೆ ಕೃಷಿ ತರಬೇತಿ ವ್ಯವಸ್ಥೆ ಇರುತ್ತದೆ.
- ಪಿ.ಯು.ಸಿ / ಪದವಿಯಲ್ಲಿ ಶೇ.೮೫ ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಡಾ.ಪಿ.ದಯಾನಂದ ಪೈ ಪ್ರಾಯೋಜಿತ ಸಹಾಯಧನದ ಸೌಲಭ್ಯವಿರುತ್ತದೆ.
- ಕಾಲೇಜು ಸಂಸ್ಥೆಯಿಂದ ಕಾಲೇಜು ಶಿಕ್ಷಣ ಇಲಾಖೆಯ ವತಿಯಿಂದ ಮೃದು ಕೌಶಲ್ಯ, ವೃತ್ತಿ ಕೌಶಲ್ಯ, ವ್ಯಕ್ತಿತ್ವ ವಿಕಸನ ಹಾಗೂ ತಂತ್ರಜ್ಞಾನ ಕೌಶಲ್ಯಗಳಲ್ಲಿ ಪರಿಣತಿ ಹೊಂದಲು ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ.

## ಕಾಲೇಜಿನಲ್ಲಿ ಲಭ್ಯವಿರುವ ಸೌಲಭ್ಯಗಳು:

- ಕಾಲೇಜಿನ ವೆಬ್‌ಸೈಟ್ ಮುಖಾಂತರ ಶೈಕ್ಷಣಿಕ, ಆಡಳಿತ ಹಾಗೂ ಇನ್ನಿತರೆ ಮಾಹಿತಿಗಳು ಲಭ್ಯ.
- ಕಾಲೇಜಿನಲ್ಲಿ ವಿಶಾಲವಾದ, ಸಾಕಷ್ಟು ಗಾಳಿ-ಬೆಳಕು ಲಭ್ಯವಿರುವ ಹಾಗೂ ಆಧುನಿಕ ಸೌಕರ್ಯಗಳನ್ನು ಹೊಂದಿರುವ ತರಗತಿ ಕೊಠಡಿಗಳ ಲಭ್ಯವಿದೆ.
- ಉತ್ತಮ ಗ್ರಂಥಾಲಯವನ್ನು ಹೊಂದಿದ್ದು, 13,000ಕ್ಕೂ ಮಿಕ್ಕಿದ ಪುಸ್ತಕಗಳು ಲಭ್ಯವಿದೆ. ಪರಿಶಿಷ್ಟ ಜಾತಿ / ವರ್ಗಗಳ ವಿದ್ಯಾರ್ಥಿಗಳಿಗೆ ಪುಸ್ತಕ ಬ್ಯಾಂಕ್ ಸೌಲಭ್ಯವಿದೆ.
- ಭೌತಶಾಸ್ತ್ರ, ರಸಾಯನಶಾಸ್ತ್ರ ಹಾಗೂ ಗಣಕ ವಿಜ್ಞಾನಕ್ಕೆ ಸಂಬಂಧಿಸಿದಂತೆ ಸಕಲ ಸೌಲಭ್ಯಗಳನ್ನು ಹೊಂದಿದ ಪ್ರಯೋಗಾಲಯವಿದೆ.
- ಆಡಿಯೋ ವಿಶುವಲ್ ಕೊಠಡಿಯ ಸೌಲಭ್ಯವಿದೆ.
- ವಿದ್ಯಾರ್ಥಿಗಳಿಗೆ ಉಚಿತ ಅಂತರ್ಜಾಲ ಬಳಕೆಯ ಸೌಲಭ್ಯವಿದೆ.
- ಹಿಂದುಳಿದ ವರ್ಗದ ವಿದ್ಯಾರ್ಥಿನಿಯರಿಗೆ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ವಸತಿ ನಿಲಯ ಸೌಲಭ್ಯವನ್ನು ಕಾಲೇಜು ಆವರಣದೊಳಗೆ ಕಲ್ಪಿಸುವ ಯೋಜನೆಯಿದೆ.
- ಕಾಲೇಜಿನ 15 ತರಗತಿ ಕೊಠಡಿಗಳನ್ನು ಜ್ಞಾನಸಂಗಮ-ರೂಸಾ ಕಾರ್ಯಕ್ರಮದಡಿ ಸ್ಮಾರ್ಟ್ ತರಗತಿಗಳಾಗಿ ಪರಿವರ್ತಿಸಲಾಗಿದೆ.
- ಎಜ್ಯುಸ್ಯಾಟ್ ಸೌಲಭ್ಯದಲ್ಲಿ ಸಂವಹನ ತರಗತಿಗಳ ವ್ಯವಸ್ಥೆ ಹಾಗೂ ಕಂಪ್ಯೂಟರ್ ಬಳಕೆಯ ಸೌಲಭ್ಯವಿದೆ.
- Infosys hope foundation ಸಂಸ್ಥೆಯಿಂದ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಸಾಕ್ಷರತಾ ಕೋರ್ಸ್ ಇದ್ದು, ಅದರ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲಾಗುವುದು.
- ಆನ್‌ಲೈನ್ ಪಾಠದ ವ್ಯವಸ್ಥೆ ಮತ್ತು ಆನ್‌ಲೈನ್ ಪ್ರಯೋಗಾಲಯ ಚಟುವಟಿಕೆಗಳು.

## ಪಠ್ಯೇತರ ಚಟುವಟಿಕೆಗಳು:

- ಶೈಕ್ಷಣಿಕ ವ್ಯವಸ್ಥೆಯಲ್ಲಿ ಜ್ಞಾನಾರ್ಜನೆಯೊಂದಿಗೆ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ವಿವಿಧ ಅವಕಾಶಗಳನ್ನು ಈ ವಿದ್ಯಾ ಸಂಸ್ಥೆಯು ಕಲ್ಪಿಸುತ್ತದೆ.
- ಕಾಲೇಜಿನಲ್ಲಿ ವಾಣಿಜ್ಯ ಸಂಘ, ಸಾಹಿತ್ಯ ಸಂಘ, ಲಲಿತಕಲಾ ಸಂಘ, ಮಾನವೀಯ ಸಂಘ, ವಿಜ್ಞಾನ ಸಂಘ ಇನ್ನಿತರ ವೇದಿಕೆಗಳಿದ್ದು, ವಿದ್ಯಾರ್ಥಿಗಳಿಗೆ ಪ್ರತಿಭೆಗಳನ್ನು ಅನಾವರಣಗೊಳಿಸಲು ವಿಪುಲ ಅವಕಾಶಗಳಿವೆ.
- ನಾಯಕತ್ವ ಹಾಗೂ ಸಮಾಜ ಸೇವೆಯ ಅವಕಾಶವನ್ನು ರಾಷ್ಟ್ರೀಯ ಸೇವಾ ಯೋಜನೆ, ಯುವ ರೆಡ್ ಕ್ರಾಸ್, ರೇಂಜರ್ಸ್ ಹಾಗೂ ರೋವರ್ಸ್ ಮುಖಾಂತರ ಕಲ್ಪಿಸಲಾಗುತ್ತದೆ.
- ವಿದ್ಯಾರ್ಥಿಗಳ ಕ್ರೀಡಾ ಪ್ರತಿಭೆಗೆ ಸೂಕ್ತ ಅವಕಾಶವನ್ನು ಕಲ್ಪಿಸಲಾಗುತ್ತದೆ. ಹಲವಾರು ವಿದ್ಯಾರ್ಥಿಗಳು ಈಗಾಗಲೇ ವಿಶ್ವವಿದ್ಯಾನಿಲಯ/ರಾಜ್ಯ/ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದಿರುತ್ತಾರೆ.
- ಕ್ರೀಡೆಯಲ್ಲಿ / ಲಲಿತಕಲೆಯಲ್ಲಿ ವಿಶೇಷ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಡಾ. ಪಿ. ದಯಾನಂದ ಪೈ ಪ್ರಾಯೋಜಿತ ಸಹಾಯಧನ ಸೌಲಭ್ಯವಿದೆ.

## ನಿಯಮಗಳ ಅಂಗೀಕಾರ:

ಈ ಕಾಲೇಜಿನಲ್ಲಿ ಪ್ರವೇಶ ಪಡೆದ ಪ್ರತಿಯೊಬ್ಬ ವಿದ್ಯಾರ್ಥಿಯು ಕಾಲೇಜು ಕ್ಯಾಲೆಂಡರ್‌ನಲ್ಲಿ ನಮೂದಿಸಿರುವ ಶಿಸ್ತು ಸಂಹಿತೆಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು ಹಾಗೂ ಕಾಲೇಜಿನ ನಿಯಮಾನುಸಾರವಾಗಿ ನಡೆದುಕೊಳ್ಳತಕ್ಕದ್ದು.

## 2022-23ನೇ ಸಾಲಿನ ಶುಲ್ಕದ ವಿವರ (ಅಂದಾಜು ಶುಲ್ಕ)

| ಕ್ರಮ ಸಂಖ್ಯೆ | ಶುಲ್ಕಗಳ ವಿವರ | ಸಾಮಾನ್ಯ ವಿದ್ಯಾರ್ಥಿಗಳಿಗೆ & ಹೊರ ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೆ | ಕರ್ನಾಟಕ ರಾಜ್ಯದ ಎಸ್‌ಸಿ/ಎಸ್‌ಟಿ/C-1 ವಿದ್ಯಾರ್ಥಿಗಳಿಗೆ | ಕರ್ನಾಟಕ ರಾಜ್ಯದ ವಿದ್ಯಾರ್ಥಿನಿಯರಿಗೆ |
|---|---|---|---|---|
| I | ಸರ್ಕಾರಿ ಶುಲ್ಕ | | | |
| 1 | ಅರ್ಜಿ ಶುಲ್ಕ | - | - | - |
| 2 | ಪ್ರವೇಶ ಶುಲ್ಕ | 80 | - | 80 |
| 3 | ಬೋಧನಾ ಶುಲ್ಕ | 940 | - | - |
| 4 | ಗ್ರಂಥಾಲಯ ಶುಲ್ಕ | 100 | - | 100 |
| 5 | ವೈದ್ಯಕೀಯ ಶುಲ್ಕ | 30 | - | 30 |
| 6 | ವರ್ಗಾವಣೆ ಪತ್ರ/ ವಿದ್ಯಾಭ್ಯಾಸ ಪ್ರಮಾಣಪತ್ರ ಶುಲ್ಕ | 60 | 60 | 60 |
| 7 | ಪ್ರಯೋಗಾಲಯ ಶುಲ್ಕ | 260* | - | - |
| | ಒಟ್ಟು ಸರ್ಕಾರಿ ಶುಲ್ಕ | 1210/1470 | 60 | 270 |
| II | ಅರೆ ಸರ್ಕಾರಿ ಶುಲ್ಕ | | | |
| 8 | ಗುರುತುಚೀಟಿ/ ಕ್ಯಾಲೆಂಡರ್ ಶುಲ್ಕ/ವಿವಿಧ ಸ್ಟ್ಯಾಂಪ್/ ಪ್ಲೇಸ್‌ಮೆಂಟ್ ಸೆಲ್, ಸ್ಕಿಲ್ ಡೆವಲಪ್‌ಮೆಂಟ್ | 180 | 180 | 180 |
| 9 | ವಿದ್ಯಾರ್ಥಿಕ್ಷೇಮ ನಿಧಿ ಮತ್ತು ಅಧ್ಯಾಪಕರ ಕ್ಷೇಮ ನಿಧಿ | 75 | 75 | 75 |
| 10 | ಆಂತರಿಕ ಮೌಲ್ಯಮಾಪನ ಶುಲ್ಕ | 200 | 200 | 200 |

| | | | | |
|---|---|---|---|---|
| 11 | ಕಾಲೇಜು ದಿನಾಚರಣೆ ಶುಲ್ಕ | 180 | 180 | 180 |
| 12 | ಕಾಲೇಜು ಸಂಚಿಕೆ ಶುಲ್ಕ | 180 | 180 | 180 |
| 13 | ವಾಚನಾಲಯ/ಗ್ರಂಥಾಲಯ ಗುರುತು ಚೀಟಿ ಶುಲ್ಕ ಸೇರಿ | 160 | 160 | 160 |
| 14 | ಲಲಿತಕಲೆ ಶುಲ್ಕ | 180 | 180 | 180 |
| 15 | ಕಾಲೇಜು ಅಭಿವೃದ್ಧಿ ನಿಧಿ ಶುಲ್ಕ | 200 | 200 | 200 |
| 16 | ಭಾರತ್ ಸ್ಕೌಟ್&ಗೈಡ್ಸ್ ಶುಲ್ಕ | 50 | 50 | 50 |
| 17 | ರೆಡ್‌ಕ್ರಾಸ್ ಶುಲ್ಕ | 50 | 50 | 50 |
| 18 | ಬಡ ವಿದ್ಯಾರ್ಥಿ ನಿಧಿ ಶುಲ್ಕ | 10 | 10 | 10 |
| 19 | ವಿದ್ಯಾರ್ಥಿ ಶೈಕ್ಷಣಿಕ ಸಮಿತಿ ಶುಲ್ಕ | 180 | 180 | 180 |
| 20 | ಎನ್.ಎಸ್.ಎಸ್ ಶುಲ್ಕ | 40 | 40 | 40 |
| 21 | ಕ್ರೀಡಾ ಶುಲ್ಕ | 100 | 100 | 100 |
| 22 | ಕಾಲೇಜು ಅಭಿವೃದ್ಧಿ ಸಮಿತಿ ಶುಲ್ಕ | 800 | 500 | 800 |
| 23 | ಬಳಕೆ ಶುಲ್ಕ | 3000/8000** | - | - |
| | ಒಟ್ಟು ಅರೆ ಸರ್ಕಾರಿ ಶುಲ್ಕ | 2385+3000/6000 | 2285 | 2385 |
| III | ವಿಶ್ವವಿದ್ಯಾನಿಲಯ ಶುಲ್ಕ | | | |
| 24 | ವಿ.ವಿ. ನೋಂದಣಿ ಶುಲ್ಕ | 500 | 500 | 500 |
| 25 | ವಿ.ವಿ. ಕ್ರೀಡಾ ಶುಲ್ಕ | 500 | 500 | 500 |
| 26 | ವಿ.ವಿ. ಉದ್ಯೋಗ ಮಾಹಿತಿ ಶುಲ್ಕ | 200 | 200 | 200 |
| 27 | ವಿ.ವಿ. ಅಭಿವೃದ್ಧಿ ಶುಲ್ಕ | 300 | 300 | 300 |
| 28 | ವಿ.ವಿ. ಲಲಿತ ಕಲೆ ಶುಲ್ಕ | 300 | 300 | 300 |
| 29 | ಎನ್.ಎಸ್.ಎಸ್. & ಅಧ್ಯಯನ ಪೀಠ ಶುಲ್ಕ | 15 | 15 | 15 |
| | ಒಟ್ಟು ವಿ.ವಿ. ಶುಲ್ಕ | 1815 | 1815 | 1815 |
| | ಒಟ್ಟು ಮೊತ್ತ | 5410+3000/8000 | 4160 | 4470 |

(ಶುಲ್ಕವು ಶೇ.10ರ ಏರಿಕೆಯನ್ನು ಹೊಂದುವ ಸಾಧ್ಯತೆ ಇರುತ್ತದೆ)

**ಸಮವಸ್ತ್ರ ಖರೀದಿ:** ಸಮವಸ್ತ್ರದ ಅಂದಾಜು ಬೆಲೆ ರೂ. 850.00 (ಜೊತೆ ಒಂದರ) ಆಗಿರುತ್ತದೆ. ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ರೂ. 2550.00 (3 ಜೊತೆ ಕಡ್ಡಾಯ). ಪ್ರವೇಶದ ದಿನದಂದು ಸಮವಸ್ತ್ರದ ಹಣವನ್ನು ಸರಬರಾಜು ಸಂಸ್ಥೆಗೆ ನೇರವಾಗಿ ಪಾವತಿಮಾಡಿ ಅವರಿಂದ ರಸೀದಿ ಪಡೆದುಕೊಳ್ಳತಕ್ಕದ್ದು.

- ವಿಜ್ಞಾನ ವಿದ್ಯಾರ್ಥಿಗಳು ಲ್ಯಾಬ್ ಕೋಟನ್ನು ಕಡ್ಡಾಯವಾಗಿ ಪ್ರತ್ಯೇಕವಾಗಿ ಖರೀದಿಸತಕ್ಕದ್ದು.
- ಶಿಕ್ಷಕ ರಕ್ಷಕ ಸಂಘದ ವಾರ್ಷಿಕ ಸದಸ್ಯತ್ವ ಶುಲ್ಕ ಅಂದಾಜು ರೂ. 500/-ನ್ನು ಪಿ.ಟಿ.ಎ. ಖಾತೆಗೆ ಜಮಾ ಮಾಡತಕ್ಕದ್ದು.
- ಬಳಕೆ ಶುಲ್ಕ: ಕರ್ನಾಟಕದ ವಿದ್ಯಾರ್ಥಿಗಳ ಹೆತ್ತವರ ವಾರ್ಷಿಕ ಆದಾಯ ರೂ. 44,500 ಕ್ಕಿಂತ ಹೆಚ್ಚಿರುವ ಪುರುಷ ವಿದ್ಯಾರ್ಥಿಗಳಿಗೆ ಮಾತ್ರ ಬಿ.ಸಿ.ಎ. ರೂ.8000.00, ಬಿ.ಎಸ್ಸಿ ಗಣಕ ವಿಜ್ಞಾನ ರೂ. 3000.00, ಇನ್ನಾವುದೇ ಕೋರ್ಸ್ (ಕಂಪ್ಯೂಟರ್‌ನೊಂದಿಗೆ) ರೂ. 1000.00, ದ್ವಿತೀಯ ಬಿ.ಬಿ.ಎ. ಯ ಎಲ್ಲಾ ವಿದ್ಯಾರ್ಥಿಗಳಿಗೆ ರೂ. 1000/-
- ಕರ್ನಾಟಕ ರಾಜ್ಯದ ಪ.ಜಾತಿ, ಪ.ಪಂಗಡ ಮತ್ತು ಪ್ರವರ್ಗ ಹಾಗೂ ಆದಾಯ ಮಿತಿಯುಳ್ಳ ಹಿಂದುಳಿದ ವಿದ್ಯಾರ್ಥಿಗಳಿಗೆ ಸರಕಾರದ ನಿಯಮಾನುಸಾರ ಶುಲ್ಕ ರಿಯಾಯಿತಿಗಳು ಅನ್ವಯಿಸುತ್ತವೆ.
- ಕರ್ನಾಟಕ ರಾಜ್ಯದ ಪದವಿ ವಿದ್ಯಾರ್ಥಿನಿಯರಿಗೆ ಬೋಧನಾ ಶುಲ್ಕ ಹಾಗೂ ಪ್ರಯೋಗಾಲಯ ಶುಲ್ಕ ಪಾವತಿಯಿಂದ ವಿನಾಯಿತಿ ಇದೆ.
- ಶುಲ್ಕವು ಸರ್ಕಾರದ, ವಿಶ್ವವಿದ್ಯಾನಿಲಯದ ಪರಿಶೀಲನೆಗೆ, ಮಾರ್ಪಾಡಿಗೆ ಒಳಪಟ್ಟಿದೆ. (Fees are subject to changes to be made by the University and Government)
- ಬಿಸಿಯೂಟದ ಯೋಜನೆಯನ್ನು ಈಗಾಗಲೇ ಕಾರ್ಯಗತಗೊಳಿಸಿದ್ದು, ಬಿಸಿಯೂಟ ಸಮಿತಿ, ಕಾ.ಅ. ಸಮಿತಿ ನಿರ್ಧಾರದಂತೆ ಪ್ರಥಮ/ದ್ವಿತೀಯ ವರ್ಷದ ವಿದ್ಯಾರ್ಥಿಗಳಿಂದ ರೂ. 1150/-ನ್ನು ಮತ್ತು ಅಂತಿಮ ವರ್ಷದ ವಿದ್ಯಾರ್ಥಿಗಳಿಂದ ರೂ. 1000/- ಸಂಗ್ರಹಿಸಲಾಗುವುದು. ಪ್ರತ್ಯೇಕ ಸಮಿತಿಯು ಇದರ ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತದೆ.

## ಬೋಧಕ ಸಿಬ್ಬಂದಿ ವರ್ಗ

1. ಪ್ರಾಂಶುಪಾಲರು : ಪ್ರೊ. ರಾಜಶೇಖರ ಹೆಬ್ಬಾರ್ ಸಿ.ಎಂ.ಕಾಂ.,ವಾಣಿಜ್ಯಶಾಸ್ತ್ರ ಸಹ ಪ್ರಾಧ್ಯಾಪಕರು
2. ಕನ್ನಡ ವಿಭಾಗ : ಡಾ. ರವಿಕುಮಾರ ಎಂ.ಪಿ., ಎಂ.ಎ., ಬಿ.ಎಡ್., ಪಿಹೆಚ್.ಡಿ.-ಸಹಾಯಕ ಪ್ರಾಧ್ಯಾಪಕರು
ಡಾ. ಜ್ಯೋತಿಪ್ರಿಯಾ, ಎಂ.ಎ., ಪಿಹೆಚ್.ಡಿ.-ಸಹಾಯಕ ಪ್ರಾಧ್ಯಾಪಕರು
ಡಾ. ನಾಗವೇಣಿ ಎನ್., ಎಂ.ಎ., ಪಿಹೆಚ್.ಡಿ.-ಸಹ ಪ್ರಾಧ್ಯಾಪಕರು
(ಎಸ್.ವಿ.ಎಸ್. ಕಾಲೇಜು ಬಂಟ್ವಾಳ ಇಲ್ಲಿಂದ ನಿಯೋಜನೆ ಮೇರೆಗೆ)
3. ಇಂಗ್ಲೀಷ್ ವಿಭಾಗ : ಪ್ರೊ. ನವೀನ್ ಆಗಸ್ಟಿನ್ ಹೆರುಷ್ ಡಾಯಸ್, ಎಂ.ಎ., ಬಿ.ಎಡ್.,
ಪಿಜಿಸಿಟಿಇ-ಸಹಾಯಕ ಪ್ರಾಧ್ಯಾಪಕರು (ವಿಭಾಗ ಮುಖ್ಯಸ್ಥರು)
ಪ್ರೊ. ನಿವೇದಿತಾ ಕ್ಯಾರೋಲಿನ್ ಲೋಬೋ, ಎಂ.ಎ., ಎಂ.ಫಿಲ್., ಬಿ.ಎಡ್.,
ಪಿಜಿಸಿಟಿಇ-ಸಹಾಯಕ ಪ್ರಾಧ್ಯಾಪಕರು
4. ವಾಣಿಜ್ಯಶಾಸ್ತ್ರ ವಿಭಾಗ : ಪ್ರೊ. ಸುವರ್ಣಮಾಲಿನಿ ಬಿ., ಎಂ.ಕಾಂ.-ಸಹ ಪ್ರಾಧ್ಯಾಪಕರು (ವಿಭಾಗ ಮುಖ್ಯಸ್ಥರು)
ಡಾ. ಲೋಕೇಶ್‌ನಾಥ್ ಬಿ., ಎಂ.ಕಾಂ., ಪಿಹೆಚ್.ಡಿ.-ಸಹಾಯಕ ಪ್ರಾಧ್ಯಾಪಕರು
ಪ್ರೊ. ನಾಗರಾಜ ಎಂ., ಎಂ.ಕಾಂ.-ಸಹಾಯಕ ಪ್ರಾಧ್ಯಾಪಕರು
ಪ್ರೊ. ದೇವಿಪ್ರಸಾದ್, ಎಂ.ಕಾಂ.-ಸಹಾಯಕ ಪ್ರಾಧ್ಯಾಪಕರು
5. ನಿರ್ವಹಣಾಶಾಸ್ತ್ರ ವಿಭಾಗ : ಡಾ. ಮಾಲತಿ ಕೆ., ಎಂ.ಕಾಂ., ಪಿಹೆಚ್.ಡಿ.-ಸಹಾಯಕ ಪ್ರಾಧ್ಯಾಪಕರು (ವಿಭಾಗ ಮುಖ್ಯಸ್ಥರು)
6. ಇತಿಹಾಸ ವಿಭಾಗ : ಡಾ. ನವೀನ್, ಎಂ.ಎ., ಪಿಹೆಚ್.ಡಿ.-ಸಹ ಪ್ರಾಧ್ಯಾಪಕರು (ವಿಭಾಗ ಮುಖ್ಯಸ್ಥರು)
7. ರಾಜ್ಯಶಾಸ್ತ್ರ ವಿಭಾಗ : ಡಾ. ನಾಗಪ್ಪ ಗೌಡ ಕೆ., ಎಂ.ಎ., ಎಂ.ಫಿಲ್, ಪಿಹೆಚ್.ಡಿ.-ಸಹ ಪ್ರಾಧ್ಯಾಪಕರು (ವಿಭಾಗ ಮುಖ್ಯಸ್ಥರು)
ಡಾ. ಶರ್ಮಿಳಾ ರೈ ಬಿ., ಎಂ.ಎ., ಎಂ.ಫಿಲ್, ಪಿಹೆಚ್.ಡಿ.-ಸಹ ಪ್ರಾಧ್ಯಾಪಕರು
ಪ್ರೊ. ನಸೀಮಾ ಬೇಗಂ ಎಚ್., ಎಂ.ಎ.-ಸಹಾಯಕ ಪ್ರಾಧ್ಯಾಪಕರು
8. ಸಮಾಜಶಾಸ್ತ್ರ ವಿಭಾಗ : ಡಾ. ಶೇಷಪ್ಪ ಕೆ., ಎಂ.ಎ., ಪಿಹೆಚ್.ಡಿ.-ಸಹಾಯಕ ಪ್ರಾಧ್ಯಾಪಕರು (ವಿಭಾಗ ಮುಖ್ಯಸ್ಥರು)
ಪ್ರೊ. ಸುಮನ ಬಿ., ಎಂ.ಎ., ಬಿ.ಎಡ್.-ಸಹಾಯಕ ಪ್ರಾಧ್ಯಾಪಕರು
9. ಸಮಾಜಕಾರ್ಯ ವಿಭಾಗ: ಪ್ರೊ. ನಿತಿನ್ ವಿ. ಬೋಳ್ವೆಕರ್, ಎಂ.ಎಸ್.ಡಬ್ಲ್ಯು.-ಸಹಾಯಕ ಪ್ರಾಧ್ಯಾಪಕರು (ವಿಭಾಗ ಮುಖ್ಯಸ್ಥರು)
ಪ್ರೊ. ಅರುಣಾಕುಮಾರಿ, ಎಂ.ಎಸ್.ಡಬ್ಲ್ಯು.-ಸಹಾಯಕ ಪ್ರಾಧ್ಯಾಪಕರು
10. ಮನಃಶಾಸ್ತ್ರ ವಿಭಾಗ : ಪ್ರೊ. ನಯನಕುಮಾರಿ ಕೆ., ಎಂ.ಎ.-ಸಹಾಯಕ ಪ್ರಾಧ್ಯಾಪಕರು (ವಿಭಾಗ ಮುಖ್ಯಸ್ಥರು)
ಪ್ರೊ. ಶಾಂತಿ, ಎಂ.ಎ., ಬಿ.ಎಡ್.-ಸಹಾಯಕ ಪ್ರಾಧ್ಯಾಪಕರು
11. ಅರ್ಥಶಾಸ್ತ್ರ ವಿಭಾಗ : ಪ್ರೊ. ಪುರುಷೋತ್ತಮ ಭಟ್ ಎಚ್.,ಎಂ.ಎ.-ಸಹಾಯಕ ಪ್ರಾಧ್ಯಾಪಕರು (ವಿಭಾಗ ಮುಖ್ಯಸ್ಥರು)
12. ಗಣಿತಶಾಸ್ತ್ರ ವಿಭಾಗ : ಡಾ. ಮಹೇಶ್ ಕೆ.ಜಿ., ಎಂ.ಎಸ್ಸಿ.,ಎಂ.ಫಿಲ್.,ಪಿಹೆಚ್.ಡಿ.-ಸಹಾಯಕ ಪ್ರಾಧ್ಯಾಪಕರು (ವಿಭಾಗ ಮುಖ್ಯಸ್ಥರು)
ಪ್ರೊ. ಶಿಲ್ಪಿ ರೊಡ್ರಿಗಸ್, ಎಂ.ಎಸ್ಸಿ., ಎಂ.ಫಿಲ್., ಬಿ.ಎಡ್.-ಸಹಾಯಕ ಪ್ರಾಧ್ಯಾಪಕರು
13. ರಸಾಯನಶಾಸ್ತ್ರ ವಿಭಾಗ : ಡಾ. ಸುಧಾಕರನ್ ಟಿ., ಎಂ.ಎಸ್ಸಿ., ಪಿಜಿಡಿಸಿಎ, ಪಿಹೆಚ್.ಡಿ.-ಸಹ ಪ್ರಾಧ್ಯಾಪಕರು
(ವಿಭಾಗ ಮುಖ್ಯಸ್ಥರು) (ಎನ್.ಎಂ.ಸಿ. ಸುಳ್ಯ ಇಲ್ಲಿಂದ ನಿಯೋಜನೆ ಮೇರೆಗೆ)
14. ಸಸ್ಯಶಾಸ್ತ್ರ ವಿಭಾಗ : ಡಾ. ಜಯಕರ ಭಂಡಾರಿ ಎಂ., ಎಂ.ಎಸ್ಸಿ, ಎಂ.ಫಿಲ್., ಪಿಹೆಚ್.ಡಿ. -
ಸಹ ಪ್ರಾಧ್ಯಾಪಕರು (ವಿಭಾಗ ಮುಖ್ಯಸ್ಥರು)
15. ಪ್ರಾಣಿಶಾಸ್ತ್ರ ವಿಭಾಗ : ಡಾ. ವಸಂತಿ ಪಿ., ಎಂ.ಎಸ್ಸಿ, ಪಿಹೆಚ್.ಡಿ.-ಸಹ ಪ್ರಾಧ್ಯಾಪಕರು (ವಿಭಾಗ ಮುಖ್ಯಸ್ಥರು)
16. ಭೌತಶಾಸ್ತ್ರ/ವಿದ್ಯುನ್ಮಾನ ವಿಭಾಗ : ಡಾ. ಕೃಷ್ಣಪ್ರಭ ಎಂ.,ಎಂ.ಎಸ್ಸಿ.,ಎಂ.ಫಿಲ್.,ಪಿಹೆಚ್.ಡಿ.-ಸಹ ಪ್ರಾಧ್ಯಾಪಕರು (ವಿಭಾಗ ಮುಖ್ಯಸ್ಥರು)
(ಸಂತ ಅಲೋಶಿಯಸ್ ಕಾಲೇಜು, ಮಂಗಳೂರು ಇಲ್ಲಿಂದ ನಿಯೋಜನೆ ಮೇರೆಗೆ)
17. ಗಣಕವಿಜ್ಞಾನ ವಿಭಾಗ : ಪ್ರೊ. ಸುವರ್ಣ ಎಚ್., ಎಂ.ಸಿ.ಎ.-ಸಹಾಯಕ ಪ್ರಾಧ್ಯಾಪಕರು
ಪ್ರೊ. ರಘುಪತಿ, ಎಂ.ಸಿ.ಎ.-ಸಹಾಯಕ ಪ್ರಾಧ್ಯಾಪಕರು
18. ಸಂಖ್ಯಾಶಾಸ್ತ್ರ ವಿಭಾಗ : ಪ್ರೊ. ಗೋಪಾಲ್ ಎಂ. ಗೋಖಲೆ, ಎಂ.ಎಸ್ಸಿ, ಎಂ.ಫಿಲ್.-ಸಹ ಪ್ರಾಧ್ಯಾಪಕರು
(ವಿಭಾಗ ಮುಖ್ಯಸ್ಥರು)(ಗೋವಿಂದ ದಾಸ ಕಾಲೇಜು, ಸುರತ್ಕಲ್ ಇಲ್ಲಿಂದ ನಿಯೋಜನೆ ಮೇರೆಗೆ)
19. ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರ : ಶ್ರೀಮತಿ ಕುಮಾರಿ ಉಮಾ ವಿ.ಜಿ., ಎಂ.ಎಲ್.ಐ.ಎಸ್ಸಿ.-ಗ್ರಂಥಪಾಲಕರು
20. ಕ್ರೀಡಾ ವಿಭಾಗ : ಶ್ರೀ ಮಹಮ್ಮದ್ ರಫೀಕ್ ಕೆ., ಎಂ.ಪಿ.ಎಡ್., ಎಂ.ಫಿಲ್.-ದೈಹಿಕ ಶಿಕ್ಷಣ ನಿರ್ದೇಶಕರು

## ಬೋಧಕೇತರ ಸಿಬ್ಬಂದಿ ವರ್ಗ

1. ಅಧೀಕ್ಷಕರು : ಶ್ರೀ ರಮೇಶ
2. ಪರಿಚಾರಕರು : ಶ್ರೀಮತಿ ಮೋಹಿನಿ
ಶ್ರೀ ನವೀನ್ (ಜಂಟಿ ನಿರ್ದೇಶಕರ ಕಚೇರಿಗೆ ನಿಯೋಜನೆ)

ಕಾಲೇಜು ಶಿಕ್ಷಕ-ರಕ್ಷಕ ಸಂಘದ ಅಧ್ಯಕ್ಷರು : ಶ್ರೀ ಗಣೇಶ್ ಭಟ್ ಪಿ.
ಕಾಲೇಜು ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷರು : ಶ್ರೀ ಗುರುಪ್ರಸಾದ್



# ಸರ್ಕಾರಿ ಪ್ರಥಮ ದರ್ಜೆ ಸಂಜೆ ಕಾಲೇಜು

ರಥಬೀದಿ, ಮಂಗಳೂರು

ಸರ್ಕಾರಿ ಪ್ರಥಮ ದರ್ಜೆ ಸಂಜೆ ಕಾಲೇಜು, ರಥಬೀದಿ, ಮಂಗಳೂರು ಈ ಕಾಲೇಜು 2021-22ನೇ ಶೈಕ್ಷಣಿಕ ವರ್ಷದಲ್ಲಿ ಉದ್ಯೋಗನಿರತರಿಗೆ ಸಂಜೆ ಉನ್ನತ ಶಿಕ್ಷಣ ಪಡೆಯಲು ಅನುಕೂಲವಾಗುವ ಹಾಗೂ ಉನ್ನತ ಶಿಕ್ಷಣದಿಂದ ವಂಚಿತರಾದ ಯುವಜನತೆಗೆ ಶಿಕ್ಷಣ ಪಡೆಯಲು ನೆರವಾಗುವ ಉದ್ದೇಶದಿಂದ ಪ್ರಸ್ತುತ ಶಾಸಕರೂ ಹಾಗೂ ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರೂ ಆದ ಮಾನ್ಯ ಶ್ರೀ ಡಿ. ವೇದವ್ಯಾಸ ಕಾಮತ್‌ರವರ ಕೋರಿಕೆ ಮೇರೆಗೆ ಹಾಗೂ ಮಹಾಪೋಷಕರಾದ ಡಾ. ಪಿ. ದಯಾನಂದ ಪೈ ಅವರ ಒತ್ತಾಸೆಯ ಮೇರೆಗೆ ಕರ್ನಾಟಕ ಸರ್ಕಾರದಿಂದ ಮಂಜೂರಾಗಿರುತ್ತದೆ.

ಕರ್ನಾಟಕ ಸರಕಾರದ ಉನ್ನತ ಶಿಕ್ಷಣ ಇಲಾಖೆಯು ಸಂಧ್ಯಾಶಕ್ತಿ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಯ ವೃತ್ತಿ / ಉದ್ಯೋಗನಿರತ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳ ದುಡಿಯುವ ಯುವಜನತೆಗೆ ಈಗಿರುವ ದಿನದ ಕಾಲೇಜಿನ ಆವರಣದಲ್ಲಿಯೇ ಉನ್ನತ ಶಿಕ್ಷಣವನ್ನು ಪಡೆಯಲು ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಸಂಜೆ ಕಾಲೇಜು ರೂಪುಗೊಂಡಿರುತ್ತದೆ.

ರಾಜ್ಯದ ಆಯ್ಕೆ ಮಹಾನಗರ ಪಾಲಿಕೆಗಳಲ್ಲಿ ಪ್ರಾಯೋಗಿಕವಾಗಿ ಸಂಧ್ಯಾ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ 2021-22ನೇ ಸಾಲಿನ ಆಯವ್ಯಯದಲ್ಲಿ ರಾಜ್ಯಸರಕಾರದ ಘೋಷಣೆಯಂತೆ ರಾಜ್ಯದ ಮಂಗಳೂರು ಮಹಾನಗರ ಪಾಲಿಕೆ ಸಹಿತ 11 ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಪ್ರಸ್ತುತ ಅಸ್ತಿತ್ವದಲ್ಲಿರುವ ಮೂಲ ಸೌಕರ್ಯಗಳನ್ನು ಉಪಯೋಗಿಸಿಕೊಂಡು ಸಂಜೆ ಕಾಲೇಜು ಆರಂಭಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ ಕಾಲೇಜು ರಥಬೀದಿಯ ಡಾ. ಪಿ.ದಯಾನಂದ ಪೈ-ಪಿ.ಸತೀಶ್ ಪೈ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಂಗಳೂರು ಇಲ್ಲಿನ ಆವರಣದಲ್ಲಿ ಆರಂಭಿಸಲಾಗುತ್ತದೆ. ಸದ್ರಿ ಕಾಲೇಜಿನ ಆರಂಭದಿಂದ ಮಂಗಳೂರು ಜನರ ಬಹುದಿನಗಳ ಬೇಡಿಕೆ ಈಡೇರಿದಂತಾಗಿದೆ.

## VISION STATEMENT

"Visualizing dreams of higher education of working and vocation class youth community of economically, socially, geographically backward sections of the society and to make them socially and economically competent, self-dependent and global human resources of the world."

## ಸ್ನಾತಕ ಪದವಿಯ ವಿಷಯಗಳ ವಿನ್ಯಾಸ

| ಕ್ರ.ಸಂ. | DSCC<br>Discipline core subjects<br>ಮುಖ್ಯ ವಿಷಯಗಳು<br>(ಯಾವುದಾದರೂ ಎರಡು ವಿಷಯಗಳನ್ನು ಮಾತ್ರ ಆಯ್ದುಕೊಳ್ಳಬೇಕು) | OE<br>Open Elective Subject<br>ಮುಕ್ತ ಐಚ್ಛಿಕ ವಿಷಯ | AECC-01<br>Ability Enhance Subject Compulsory Language<br>ಸಾಮರ್ಥ್ಯ ವೃದ್ಧಿ ಭಾಷಾ ವಿಷಯ (ಕಡ್ಡಾಯ) | AECC-02<br>Ability Enhance Subject Elective Language<br>ಸಾಮರ್ಥ್ಯ ವೃದ್ಧಿ ಭಾಷಾ ವಿಷಯ (ಆಯ್ಕೆ) |
|---|---|---|---|---|
| 1 | ಬಿ.ಕಾಂ. - ವಿ.ವಿ. ನಿಗದಿಪಡಿಸಿದ ಕಡ್ಡಾಯ ವಿಷಯಗಳು | DSCC ಯಲ್ಲಿ ಆರಿಸಿಕೊಂಡಿರುವ ಎರಡು ವಿಷಯಗಳನ್ನು ಬಿಟ್ಟು ಇನ್ನುಳಿದಿರುವ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಮಾತ್ರ ಆಯ್ದುಕೊಳ್ಳುವುದು | ಕನ್ನಡ ಭಾಷಾ ವಿಷಯ (ಕಡ್ಡಾಯ)<br>ಪರಿಸರ ಅಧ್ಯಯನ ಮತ್ತು ಭಾರತೀಯ ಸಂವಿಧಾನ ಅಧ್ಯಯನ<br>1 ರಿಂದ 4ರವರೆಗಿನ ಯಾವುದಾದರು ಎರಡು ಸೆಮಿಸ್ಟರ್‌ಗಳಲ್ಲಿ ವಿ.ವಿ.ಯ ಅಧಿಸೂಚನೆ ಪ್ರಕಾರ | ಇಂಗ್ಲಿಷ್, ಸಂಸ್ಕೃತ, ಹಿಂದಿ, ತುಳು<br>** [illegible] ಯಾವುದಾದರೂ ಒಂದು ಭಾಷೆಯನ್ನು ಮಾತ್ರ ಆಯ್ದುಕೊಳ್ಳುವುದು<br>ಕೌಶಲ್ಯಾಧಾರಿತ (ಕೌಶಲ್ಯ & ಮೌಲ್ಯಾಧಾರಿತ) ವಿಷಯಗಳು ವಿ.ವಿ. ಅಧಿಸೂಚನೆ ಪ್ರಕಾರ ಒದಗಿಸಲಾಗುವುದು ([illegible] ಸೆಮಿಸ್ಟರ್‌ಗಳಲ್ಲಿ) |
| 2 | ಬಿ.ಸಿ.ಎ - ವಿ.ವಿ. ನಿಗದಿಪಡಿಸಿದ ಕಡ್ಡಾಯ ವಿಷಯಗಳು | | | |

ಕರ್ನಾಟಕ ಸರಕಾರ

GOVERNMENT OF KARNATAKA

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

DEPARTMENT OF COLLEGIATE AND TECHNICAL EDUCATION



ಶ್ರೀ ವಿ. ಸುನಿಲ್ ಕುಮಾರ್
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಸಚಿವರು, ಕರ್ನಾಟಕ ಸರಕಾರ
ಮತ್ತು ದ.ಕ. ಜಿಲ್ಲಾ ಉಸ್ತುವಾರಿ ಸಚಿವರು



ಶ್ರೀ ಡಿ. ವೇದವ್ಯಾಸ ಕಾಮತ್
ಶಾಸಕರು, ಮಂಗಳೂರು ದಕ್ಷಿಣ ಕ್ಷೇತ್ರ
ಮತ್ತು ಅಧ್ಯಕ್ಷರು, ಕಾಲೇಜು ಅಭಿವೃದ್ಧಿ ಸಮಿತಿ

ಸಮಾಜದ ಶ್ರಮಿಕ ಮತ್ತು ವೃತ್ತಿನಿರತ ಹಿಂದುಳಿದ ವರ್ಗಗಳ ಯುವಜನಾಂಗದ ಉನ್ನತ ಶಿಕ್ಷಣದ ಕನಸಿನ ಸಾಕ್ಷಾತ್ಕಾರ ಹಾಗೂ ವಿಶ್ವಮಾನವ ಸಂಪನ್ಮೂಲಗಳಾಗಿ ಪರಿವರ್ತನೆ.

Visualizing dreams of higher education of working & vocation class youths of backward sections of the society and transforming them into global human resources.

# ಸರ್ಕಾರಿ ಪ್ರಥಮ ದರ್ಜೆ ಸಂಜೆ ಕಾಲೇಜು

## ರಥಬೀದಿ, ಮಂಗಳೂರು

**ರಥಬೀದಿ, ಮಂಗಳೂರು - 575001, ದ.ಕ. ಜಿಲ್ಲೆ, ಕರ್ನಾಟಕ ರಾಜ್ಯ**

**(ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜನೆಗೆ ಒಳಪಟ್ಟಿದೆ.)**

# GOVERNMENT FIRST GRADE EVENING COLLEGE

## CARSTREET, MANGALURU

**CARSTREET, MANGALURU-575001, D.K. DIST., KARNATAKA STATE**

**(Affiliated to Mangalore University)**

**ದೂರವಾಣಿ (ಸ್ಥಿರ) Phone(Land) : 0824-2494109, 2491073**

**Mobile: 8970788947 / 9902587083**

**ಮಿಂಚಂಚೆ E-mail: gfgecc@yahoo.com**

**ವೆಬ್ ವಿಳಾಸ Website : http://www.gfgecc.org**

**Timings: 5.00pm to 9.00pm**



# ವಿವರಣಾ ಪತ್ರ-2022 ಲಭ್ಯವಿದೆ

ವಿ.ಸೂ.: ಆನ್‌ಲೈನ್ ಪ್ರವೇಶವನ್ನು ಕಾಲೇಜಿನಲ್ಲಿಯೇ ಪ್ರವೇಶ ಪಡೆದ ಕೂಡಲೇ ಮಾಡಿಕೊಡಲಾಗುವುದು.
ಸರ್ಕಾರದ ನಿರ್ಣಯ ಮತ್ತು ಆದಾಯಮಿತಿಗೊಳಪಟ್ಟು ಎಲ್ಲಾ ವಿದ್ಯಾರ್ಥಿನಿಯರಿಗೆ
ಶುಲ್ಕ ಮರುಭರ್ತೀಕರಣದ ವ್ಯವಸ್ಥೆಯಿದೆ.